Q.—634. Sri T. G. THIMME GOWDA (Tiptur).—

Will the Government be pleased to state :—

whether estimates have again been prepared to supply electric power to Halepalya, Hosapalya and Annapura Villages of Tiptur Taluk ?

A.—Sri A. G. RAMACHANDRA RAO (Minister for Law and Education) [on behalf of Sri K. HANUMANTHAIYA (Chief Minister)].—

Yes.

Q.—638. Sri T. G. THIMME GOWDA (Tiptur).—

Will the Government be pleased to state :—

(*a*) the number of applications received for the installation of irrigation pumps in Tiptur Taluk during the three years 1950, 1951 and 1952 ; and

(*b*) of these, the number of persons that have been supplied with pumps ?

A.—Sri A. G. RAMACHANDRA RAO (Minister for Law and Education) [on behalf of Sri K. HANUMANTHAIYA (Chief Minister)].—

(*a*)	1949-50	..	Only 1
	1950-51	..	4
	1951-52	..	4

(*b*) Nine pumps are in service in Tiptur Taluk.

Mr. SPEAKER.—It is understood that all the nine questions are now put by the respective Members.

Sri H. C. LINGA REDDY.—Has it come to the notice of the Government that for the last one year no irrigation pumps are given to Malur Taluk on the ground that the load is very low ?

Sri A. G. RAMACHANDRA RAO.—Yes, there has been some difficulty in regard to grant of irrigation pumps.

Sri H. C. LINGA REDDY.—What is the difficulty ?

Sri A. G. RAMACHANDRA RAO.—Conversion of cycles from 25 to 50 is going on and its completion would give us better capacity to supply the demand.

Sri H. C. LINGA REDDY.—Will you take steps to increase the capacity, Sir ?

Sri A. G. RAMACHANDRA RAO.—Yes, it is progressing.

Sri H. C. LINGA REDDY.—Regarding answer to (*c*) of my question .....

Sri A. G. RAMACHANDRA RAO.—Regarding that answer, Sir, I feel there is an error. I shall get it verified and inform the Hon'ble Member.

Sri H. C. LINGA REDDY.—The other alternative is, pending conversion of 25 to 50 cycles, the capacity of transformers has to be increased to facilitate rural electrification in the Kolar District.

Sri A. G. RAMACHANDRA RAO.—I do not know what it is in this particular locality. Generally this is being done. The capacity of the transformers also is being increased.

Sri H. C. LINGA REDDY.—For Malur Taluk, an estimate has been sent up for two lakhs for increasing the capacity of the transformers, is it not ?

Sri A. G. RAMACHANDRA RAO.—As I said, it is being taken up by district and talukwar.

Sri H. C. LINGA REDDY.—Will the Government kindly expedite the work relating to increasing the capacity of the transformers so that they may provide power for lighting and other purposes in villages ?

Sri A. G. RAMACHANDRA RAO.—Yes, Government is anxious to do its very best in the matter.

Sri H. C. LINGA REDDY.—With regard to this sum of 50 lakhs loan given by the Government of India to be spent in scarcity areas, have the Government prepared any scheme ?

Sri A. G. RAMACHANDRA RAO.—They have allocated amounts to places taking into consideration the distress in the locality compared to other districts.

Sri H. C. LINGA REDDY.—Is it true, Sir, that when the Government of India granted this loan of fifty lakhs, they attached a condition that all the amount has to be spent in the three districts of Tumkur, Kolar and Chitaldrug where conditions are very bad?

Sri A. G. RAMACHANDRA RAO.—It is not a condition. But that aspect has been kept in view.

Sri H. C. LINGA REDDY.—What is the reason for allotting only five lakhs to Kolar District where conditions are very bad?

Sri A. G. RAMACHANDRA RAO.—Because larger grants were given a little prior to that.

Sri H. C. LINGA REDDY.—Have the Rama Murthy Committee also recommended that the lift irrigation by electricity should be expedited to give relief in the famine areas Sir?

Sri A. G. RAMACHANDRA RAO.—Yes, Sir.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕೇಂದ್ರ ಸರ್ಕಾರದಿಂದ ಬಂದಿರತಕ್ಕ 50 ಲಕ್ಷ ರೂಪಾಯಿಗಳ ಸಹಾಯ ದ್ರವ್ಯದಲ್ಲಿ ರೂರರ್ ಎರೆಕ್ಟ್ರಿಫಿಕೇಷನ್ನಿಗೂ ಹಣ ಸೇರಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

Mr. SPEAKER.—I may repeat for the kind information of the Hon'ble Members that all the nine questions are taken together.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—10 ಗ್ರಾಮಕ್ಕೆ ರೂರರ್ ಎರೆಕ್ಟ್ರಿಫಿಕೇಷನ್ ಆಗಿದೆ ಎಂದು ಹೇಳಿದ್ದೀರಿ. ಎಷ್ಟು ರಿಟರ್ನ್ ಬರುತ್ತದೆ?

Sri A. G. RAMACHANDRA RAO.—That varies from place to place.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇರಿಗೇಷನ್ ಪಂಪಿಗೆ ಎಷ್ಟು ಬರುತ್ತದೆ; ಅಂದಾಜು ಎಷ್ಟು ಮಾಡಿದ್ದೀರಿ? ಬೇರೆ ಬೇರೆ ಹೇಳುವುದಕ್ಕೆ ಸಾಧ್ಯವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಸಾಧ್ಯವಿಲ್ಲ. ಕಾರಣ, ಅಂಕಿ ಅಂಶ ಇಲ್ಲ ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಒಟ್ಟಿನಲ್ಲಿ ನೋಡುವುದಾದರೆ ರೂರರ್ ಎರೆಕ್ಟ್ರಿಫಿಕೇಷನ್ನಿಗೆ ರಿಟರ್ನ್ ಕಡಮೆ ಅಲ್ಲವೇ!

Sri A. G. RAMACHANDRA RAO.—I believe so, Sir.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬಾಗೇಪಲ್ಲ ಗುಡಿಬಂಡೆ ಈ ಎರಡು ತಾಲ್ಲೂಕುಗಳಿಗೆ ಮಾತ್ರ ಅಲೊಕೇಟ್ ಮಾಡಿಲ್ಲ ಎಂಬುದು ಗೊತ್ತೇ!

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—5 ಲಕ್ಷ ರೂಪಾಯಿ ಅಲೊಕೇಟ್ ಮಾಡಿರುವುದರಲ್ಲಿ ಒಂದೇ ಒಂದು ತಾಲ್ಲೂಕಿಗೆ ಕೊಟ್ಟಿರುವುದು ಗೊತ್ತಿಲ್ಲವೇ?

Sri A. G. RAMACHANDRA RAO.—The grant is insufficient generally.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬಾಗೇಪಲ್ಲ ತಾಲ್ಲೂಕು ಒಂದರಲ್ಲೇ 1,000 ಭಾವಿಗಳಿರುವುದು ಗೊತ್ತೇ?

Sri A. G. RAMACHANDRA RAO.—We have kept the considerations, namely that the Kolar District is largely affected by distress, the funds that have been distributed previously and the present availability of funds, as also the scope for developments—all these considerations have been kept in view in making allotments.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈಗ ಕೇಂದ್ರದಿಂದ 50 ಲಕ್ಷ ರೂಪಾಯಿ ಕ್ಷಾಮ ಪ್ರದೇಶಗಳಿಗೆ ಖರ್ಚುಮಾಡಬೇಕೆಂದು ಕೊಟ್ಟಿರುವುದರಲ್ಲಿ 5 ಲಕ್ಷ ರೂಪಾಯಿಗಳನ್ನು ಅಲಾಟ್‌ಮಾಡಿರುವುದು ಬಹಳ ಕಡಮೆ, ಬಾಕಿಕಡೆಗಳಿಗೂ ಪವರ್ ಕೊಡುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ?

Sri A. G. RAMACHANDRA RAO.—Besides, we must have sufficient power also.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಪವರ್ ಯಾವಾಗ ಕೊಡಲಿಕ್ಕೆ ಸಾಧ್ಯವಾಗುತ್ತದೆ!

Sri A. G. RAMACHANDRA RAO.—We know that it is inadequate It is rather very difficult to answer.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ಎರಡು ತಾಲ್ಲೂಕುಗಳಿಗೆ ಎಸ್ಟಿಮೇಟ್ ನಡೆಯುತ್ತಾ ಇದೆಯೇ!

ಶ್ರೀ ಎಚ್. ಸಿದ್ದವೀರಪ್ಪ.—ಎಸ್ಟಿಮೇಟ್ ಆಗಿದೆ. ವರ್ಕ್ ಪ್ರೋಗ್ರೆಸ್ ಆಗುತ್ತಾ ಇದೆ. 50 ಲಕ್ಷ ರೂಪಾಯಿಗಳ ಸ್ಕೀಂ ಕೊಟ್ಟು ವರ್ಕ್ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ಎರಡು ತಾಲ್ಲೂಕುಗಳಿಗೆ 50 ಲಕ್ಷ ರೂಪಾಯಿಗಳಲ್ಲಿ ಎಷ್ಟು ಕೊಡುತ್ತೀರಿ ಎಂದು?

Sri H. SIDDAVEERAPPA.—It is not like that, that they have given.

ಒಟ್ಟಿನಲ್ಲಿ ಅರೊಕೇಟ್ ಮಾಡಿದ್ದೇವೆ. ರಿಟರ್ನ್ ಏನುಬರುತ್ತದೆ ಎಂಬುದನ್ನು ನೋಡಿಕೊಂಡು ಅನೇಕ ಕಡೆ ಕೊಡಬೇಕಾ. 1,000 ರೂಪಾಯಿ ಒಳಗೆ ಎಲ್ಲಿ ಬರುತ್ತದೆಯೋ ಅಲ್ಲಿ ರೆಮ್ಯುನರೇಟಿವ್ ಆದರೆ ಕೊಡ ಬಹುದು.

ಶ್ರೀ ಬಿ. ಪಿ. ನಾರಾಯಣರೆಡ್ಡಿ —ಅಷ್ಟರೊಳಗೆ ಇಲ್ಲ ಆಗುತ್ತದೆ ಎಂದು ನಂಬೋಣವೇ !

Sri H. SIDDAVEERAPPA.—I am speaking only with reference to lift irrigation. We give preference. There are schemes which are well within Rs. 1,000 and there are schemes where we have got already lakhs and lakhs of rupees estimates, and everything ready. As and when funds are available, we are going to take up all those schemes.

ಶ್ರೀ ಯು. ಎಂ. ಮಾದಪ್ಪ.—ಹಣದ ಅಭಾವದಿಂದ ರೂರಲ್ ಎಲೆಕ್ಟ್ರಿಫಿಕೇಷನ್ನನ್ನು ನಿಲ್ಲಿಸಬೇಕೆಂದು ನರ್ಮಾ ರದ ಆರ್ಡರ್ ಆಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಮುಚ್ಚಳಿಕೆ ಕೊಟ್ಟು ರಿಟರ್ನ್ ಎಷ್ಟು ಬರಬೇಕೋ ಅಷ್ಟು ಕೊಡುತ್ತೇವೆ ಎಂದು ಗ್ರಾಮಸ್ಥರೂ ಪಂಚಾಯತಿಯವರೂ ಹೇಳಿ ದ್ದರೂ ಸಹ ತೆಗೆದುಕೊಳ್ಳದೇ ಇರುವ ಸಂದರ್ಭಗಳು ಇವೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥವು ಕೆಲವು ಇವೆ. ಲೈನ್ ತೆಗೆದುಕೊಂಡು ಹೋದಮೇಲೆ ಅವರು ಮನವಿ ಮಾಡಿ ಕೊಳ್ಳಲು ಅವಕಾಶವಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ 50 ಲಕ್ಷ ರೂಪಾಯಿಗಳಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದೀರಿ ?

Sri H. SIDDAVEERAPPA.—I will place the details on the table of the House—the decision that we have taken and how much is to be spent on each district.

Mr. SPEAKER.—If it is available now, the Hon'ble Minister may give it as the Members are anxious.

Sri H. SIDDAVEERAPPA.—We will give it in about two minutes.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಕೊಟ್ಟಿರ ತಕ್ಕ ಪಂಪು ಸೆಟ್‌ಗಳಲ್ಲಿ ಅಹಾರವ ಬೆಳೆಗೋಸ್ಕರ ವಾಗಿ ಎಷ್ಟು ಕೊಟ್ಟಿದ್ದೀರಿ ? ಇತರ ಬೆಳೆಗಳಿಗಾಗಿ ಎಷ್ಟುಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲರೂ ಮೊದಲು ಆಹಾರದ ಬೆಳೆಗೆಂದೇ ಮುಚ್ಚಳಿಕೆ ಬರೆದುಕೊಟ್ಟು ತೆಗೆದುಕೊಳ್ಳುತ್ತಾರೆ. ಹಾಗೆ ಮುಚ್ಚಳಿಕೆ ಬರೆಸಿ ಕೊಳ್ಳದೆ ಸರ್ಕಾರದವರೂ ಸಹ ಕೊಡುತ್ತಿಲ್ಲ. ಆದರೆ ಹಾಗೆ ಆಹಾರ ಧಾನ್ಯಗಳನ್ನು ಬೆಳೆಯುತ್ತೇವೆಂದು ಹೇಳಿ ಮುಚ್ಚಳಿಕೆ ಬರೆದುಕೊಟ್ಟ ಎಲೆಕ್ಟ್ರಿಸಿಟಿಯನ್ನು ತೆಗೆದು ಕೊಂಡಿರತಕ್ಕವರು ಹಾಗೆ ಪರತಿ,ಗೆ ತಪ್ಪಿ ನಡೆ ಯುತ್ತಿದ್ದಾರೆಂದು ವರದಿಬಂದರೆ ಅಂಥವರ ಮೇಲೆ ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಲೆಕ್ಟ್ರಿಸಿಟಿ ಯನ್ನು ಆಹಾರದ ಬೆಳೆಗಾಗಿ ಕೊಡಬೇಕೆಂದು ಕೇಳತಕ್ಕ ಜನರಿಗೆ ಅದು ಸಕಾಲದಲ್ಲೊದಗದೆ ಬಹಳ ನಿಧಾನ ವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ. ಎಲ್ಲೋ ಅಲ್ಲೊಂದು ಇಲ್ಲೊಂದು ಮಾತ್ರ ಹಾಗೆ ಆಗಿರುತ್ತೆಂದು ತಿಳಿದು ಬಂದಿದೆ. ಸಂಸ್ಥಾನಾದ್ಯಂತವೂ ಎದ್ಯುಚ್ಛಕ್ತಿ ನರಬ ರಾಯಿಗಾಗಿ ಕೇಂದ್ರ ಸರ್ಕಾರದವರಿಂದ ಬಂದಿರತಕ್ಕ 50 ಲಕ್ಷ ರೂಪಾಯಿಗಳ ಗ್ರಾಂಟನ್ನೇ ಕೆಳಕಂಡಂತೆ ಹಂಚಲಾಗಿದೆ :

1	ಬೆಂಗಳೂರು	ಜಿಲ್ಲೆಗೆ 3	ಲಕ್ಷ ರೂಪಾಯಿಗಳು
2	ಮೈಸೂರು	,, 2	ಡಿಟೋ
3	ಕೋಲಾರ	,, 5	ಡಿಟೋ
4	ಚಿತ್ರದುರ್ಗ	,, 11	ಲಕ್ಷ 77 ಸಾವಿರ ರೂಪಾಯಿಗಳು
5	ಮಂಡ್ಯ	,, 1	ಲಕ್ಷ ಡಿಟೋ
6	ಚಿಕ್ಕಮಗಳೂರು	,, 2½	ಲಕ್ಷ ಡಿಟೋ
7	ತುಮಕೂರು	,, 9	ಲಕ್ಷ 94 ಡಿಟೋ
8	ಹಾಸನ	,, 3	ಲಕ್ಷ 50 ಡಿಟೋ
9	ಶಿವಮೊಗ್ಗ	,, 9	ಲಕ್ಷ 57 ಡಿಟೋ

ಹೀಗೆ ಒದಗಿಸಿರುವುದೆಲ್ಲಾ 48 ಲಕ್ಷ 28 ಸಾವಿರ ಆಗುತ್ತದೆ. ಇನ್ನು ಉಳಿಯತಕ್ಕ ಒಂದು ಲಕ್ಷ 7½ ಸಾವಿರಗಳ ಹಂಚಿಕೆ ಪರಿಶೀಲನೆಯಲ್ಲಿದೆ. ಹೀಗೆಲ್ಲಾ ಒದಗಿಸಿಕೊಟ್ಟ ಈ ಮೊಬಲಗನ್ನು ಅದಷ್ಟು ಮಟ್ಟಿಗೆ ಡಿಸ್ಟ್ರೆಸ್ ಏರಿಯಾಕ್ಕೇ ಕೊಡಬೇಕೆಂದು ತಿಳಿಸಲಾಗಿದೆ.

It is meant as a permanent measure for relieving the distress in these areas which are subjected to constant famine conditions.

ಈಗ ಇರಿಗೇಷನ್ ಕೆಲಸ ಕಾರ್ಯಗಳಿಗಾಗಿ ಕೋಲಾರ ಜಿಲ್ಲೆಗೆ 25 ಸೈಕಲ್ ಪವರಿನ ಕರೆಂಟನ್ನು ನರಬರಾಯಿ ಮಾಡಲಾಗಿದೆ. ಇನ್ನು ಶಿವಮೊಗ್ಗ-ತುಮಕೂರು ಇತ್ಯಾದಿ ಕಡೆಗಳಿಗೆ 50 ಸೈಕಲ್‌ಪವರನ್ನು ಒದಗಿಸಲಾಗಿದೆ. ಆದರೆ ಈಗಾಗಲೇ ಕೆಲವು ಕಡೆ ಈ 25 ಸೈಕಲ್ ಪವರ್ ಇರತಕ್ಕಕಡೆ ಲೋಡ್ ಜಾಸ್ತಿಯಾಗಿರುತ್ತದೆಯೆಂಬುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಯಾವ ಯಾವ ಸ್ಥಳದಲ್ಲಿ ಅಗತ್ಯ ಹೆಚ್ಚಾಗಿರುತ್ತದೆಯೋ ಅಂಥ ಕಡೆಗಳಿಗೆ ಮೊದಲು ದುಡ್ಡನ್ನು ಖರ್ಚುಮಾಡುವಂತೆ ತಿಳಿಸಲಾಗಿದೆ. ಕೇಂದ್ರ ಸರ್ಕಾರದವರು 53-54ನೆಯ ಸಾಲಿಗೆ ಒದಗಿಸಿರತಕ್ಕ 50 ಲಕ್ಷ ಸಾಲದು, ಇನ್ನು 50 ಲಕ್ಷವನ್ನೇ ಒದಗಿಸ ಬೇಕೆಂದು ಕೇಳಿದ್ದೇವೆ. ಲಿಫ್ಟ್ ಇರಿಗೇಷನ್ನಿಗೆ ಇದರಿಂದ ಬಹಳ ಒಳ್ಳೆಯದಾಗುತ್ತದೆಯೆಂದು ನಾವು ಕೇಂದ್ರದವರಿಗೆ ತಿಳಿಸಿರುವುದರಿಂದ ಅವರು ಇನ್ನೂ ಕೊಂಚ ಹೆಚ್ಚಿನ ಹಣಸಹಾಯ ನೀಡಲು ಧಾರವಸೆ ಸಹ ಕೊಟ್ಟಿದ್ದಾರೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ತುಮಕೂರು ಮತ್ತು ಗುಬ್ಬಿ ಈ ಎರಡು ತಾಲ್ಲೂಕುಗಳೂ ಕ್ಷಾಮ ಪೀಡಿತ ಪ್ರದೇಶಗಳಾಗಿವುತ್ತವೆಂಬುದು ತಮಗೆ ಗೊತ್ತಿದೆಯೇ ?

Sri H. SIDDAVEERAPPA.—Due to last year's distress conditions, we have defined certain areas as distress areas.

ಶ್ರೀ ಟಿ. ಎಸ್. ಮಾಡಲಗಿರಿಗೌಡ.—ಈ ಎರಡು ತಾಲ್ಲೂಕುಗಳಿಗೂ ನಾಲ್ಕಾರು ವರ್ಷಗಳಿಂದ ವ್ಯವಸಾಯದ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸದಿರಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಇಡೀ ಒಂದು ಜಿಲ್ಲೆಯೇ ಕ್ಷಾಮ ಪೀಡಿತ ಪ್ರದೇಶವಾಗಿರುವುದಕ್ಕೂ ಒಂದು ಜಿಲ್ಲೆಯಲ್ಲಿ ತಾಲ್ಲೂಕಾ ಮಳೆ ಕ್ಷಾಮ ಪ್ರದೇಶವಾಗಿರತಕ್ಕದ್ದಕ್ಕೂ ಬಹಳ ವ್ಯತ್ಯಾಸವಿದೆ. For instance, it has come to the notice of the Government that Pavagada and some of these areas have better facilities for lift irrigation. I do not mean to say that the other two taluks mentioned by the Members are not in need of them. But it is a question of giving priority. We will take them up, if need be, in the coming year.

ಶ್ರೀ ಕೆ. ಲಕ್ಕಪ್ಪ.—ಮೈದಾನಕ್ಕೆ ಹೆಚ್ಚಿಗೆ ಒದಗಿಸಿದ್ದೀರೋ ಮಲೆನಾಡಿಗೆ ಹೆಚ್ಚಿಗೆ ಒದಗಿಸಿದ್ದಿರೋ ?

ಶ್ರೀ ಎಚ್. ಸಿದ್ದವೀರಪ್ಪ.—ಮಲೆನಾಡಿಗಿಂತ ಮೈದಾನದಲ್ಲಿ ಡಿಸೆ್ಟ್ರಸ್ ಏರಿಯಾ ಜಾಸ್ತಿಯಿದ್ದರೂ ಆ ಮಲೆನಾಡಿನಲ್ಲಿ ಹೊನ್ನಾಳಿ, ಚೆನ್ನಗಿರಿ ಎರಡು ತಾಲ್ಲೂಕುಗಳಲ್ಲಿ ಬಹಳ ತೊಂದರೆಯಿರುವುದರಿಂದ ಅಲ್ಲಿಗೆ ಸ್ವಲ್ಪ ಹಣವನ್ನು ಹೆಚ್ಚಿಗೆ ಒದಗಿಸಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಎರಡೂ ಪ್ರದೇಶಗಳ ರೇನ್ ಫಾರ್ ತೆಗೆದುಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ತೆಗೆದುಕೊಂಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ಏಕೆ ಇಷ್ಟು ಕಡಮೆ ಹಣ ಒದಗಿಸಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ದೇವರ ದಯೆಯಿಂದ ತಾವು ಆ ಡಿಸೆ್ಟ್ರಸ್ ಏರಿಯಾದಲ್ಲಿ ಬರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಮೈಸೂರು ಜಿಲ್ಲೆಯಲ್ಲಿ ಕೂಡ 7 ತಾಲ್ಲೂಕುಗಳನ್ನು ಕ್ಷಾಮಪೀಡಿತ ಪ್ರದೇಶವೆಂಬುದಾಗಿ ತಾವು ಪರಿಗಣಿಸಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಡೀ ಜಿಲ್ಲೆಯೇ ಕ್ಷಾಮ ಪೀಡಿತ ಪ್ರದೇಶವೆಂದು ಸಾರುವುದಕ್ಕೂ ಎಲ್ಲೋ ಕೆಲವು ತಾಲ್ಲೂಕುಗಳು ಮಾತ್ರ ಕ್ಷಾಮಪೀಡಿತ ಪ್ರದೇಶವೆಂದು ಸಾರುವುದಕ್ಕೂ ಬಹಳ ವ್ಯತ್ಯಾಸ ವಿದೆಯೆಂದು ನಾನಾಗಲೇ ತಿಳಿಸಿರುತ್ತೇನೆ. It is a question of degree.

ಶ್ರೀ ಡಿ. ದೇವರಾಜ ಅರಸ್.—ಆ 7 ತಾಲ್ಲೂಕುಗಳ ಆವರೇಜ್ ರೇನ್ ಫಾಲ್ ಏನಿದೆ ?

Sri H. SIDDAVEERAPPA.—I want notice for it. I can only say that comparatively Chitaldrug, Tumkur and Kolar are worse affected than any other part of the State.

ಶ್ರೀ ಟಿ. ಸಿ. ಬಸಪ್ಪ.—ಚಿಕ್ಕಮಗಳೂರು ಜಿಲ್ಲೆಯಲ್ಲ ತರೀಕೆರೆ, ಕಡೂರು ತಾಲ್ಲೂಕುಗಳು ನಹ affected area ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ !

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ. ಅದಕ್ಕೇ ಆ ಜಿಲ್ಲೆಗೆ 2½ ಲಕ್ಷ ರೂಪಾಯಿಗಳನ್ನು ಒದಗಿಸಿರುವುದು. ನಿಮ್ಮ ತಾಲ್ಲೂಕನಲ್ಲಿ ಖರ್ಚುಮಾಡುವುದು ಬಹಳ unremunerative ಎಂದು ನಮಗೆ ವರದಿ ಬಂದಿದೆ. ಪರಿಸ್ಥಿತಿ ನೋಡಿಕೊಡಲಾಗಿರುತ್ತದೆ.

ಶ್ರೀ ಟಿ. ಸಿ. ಬಸಪ್ಪ.—ಹಾಗಾದರೆ ನಮ್ಮ ಜಿಲ್ಲೆಗೆ ಈ 2½ ಲಕ್ಷ ಸಾಕೆಂದು ತಮ್ಮ ಅಭಿಪ್ರಾಯವೇ ?

ಶ್ರೀ ಎಚ್ ಸಿದ್ದವೀರಪ್ಪ.—ಸದ್ಯಕ್ಕೆ ಸಾಕು

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನಮ್ಮ ಜಿಲ್ಲೆಗೆ ಒದಗಿಸಿರುವುದರಲ್ಲಿ ಎಷ್ಟು ಖರ್ಚಾಗಿದೆ ?

Sri H. SIDDAVEERAPPA.—I want notice. I have issued strict instructions that every pie should be spent before the official year is out.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಒಂದು ಕಾಸೂ ಕೂಡ ಖರ್ಚಾಗಿಲ್ಲವೆಂದು ಹೇಳಿದರೆ ತಾವು ಅದನ್ನು ಒಪ್ಪುತ್ತೀರಾ !

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಕಾಸು ಖರ್ಚಾಗಿಲ್ಲ ! ಲಕ್ಷಗಟ್ಟಲೆ ಖರ್ಚಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ನಮ್ಮ ಹಾಸನ ಜಿಲ್ಲೆಯಲ್ಲ ವ್ಯವಸಾಯಕ್ಕಾಗಿ ಈ ವಿದ್ಯುಚ್ಛಕ್ತಿಯನ್ನೇನಾದರೂ ಡಿಸೆ್ಟ್ರಸ್ ಏರಿಯಾಕ್ಕೆ ಒದಗಿಸಬೇಕೆಂದಿರುವಿರಾ,

ಶ್ರೀ ಎಚ್. ಸಿದ್ದವೀರಪ್ಪ.—ಒದಗಿಸಿದ್ದೇವೆ, ಕೆಲವು ಕಡೆ ಕೆಲಸ ನಡೆಯುತ್ತಿದೆ.

ಶ್ರೀ ಎ. ವಿ. ನರಸಿಂಹ ರೆಡ್ಡಿ.—ಬೆಂಗಳೂರು ಜಿಲ್ಲೆಯಲ್ಲೂ ನಹ ಕೆಲವು ಡಿಸೆ್ಟ್ರಸ್ ಏರಿಯಾಗಳಿರುತ್ತವೆಂದು ತಾವು ಹೇಳಿಲ್ಲವೆ ? ಅಲ್ಲಿಗೆ ಒದಗಿಸಿರುವ 25 ಸೈಕಲ್ ಪವರನ್ನು 50 ಸೈಕಲ್‌ಪವರಿಗೆ ಬದಲಾಯಿಸಬೇಕೆಂದು ಹೇಳಿಲ್ಲವೇ !

ಶ್ರೀ ಎಚ್. ಸಿದ್ದವೀರಪ್ಪ.—50 ಸೈಕಲ್ ಪವರಿಗೆ ಎರೆಲ್ಲ ಹೆಚ್ಚಿನ ಅಗತ್ಯವಿದೆಯೋ ಅಲ್ಲ ಅದನ್ನೇ ಬದಲಾಯಿಸಲು ತಿಳಿಸಲಾಗಿದೆ.

ಶ್ರೀ ಎ. ವಿ. ನರಸಿಂಹ ರೆಡ್ಡಿ.—ಈ ಬಗ್ಗೆ ತಮಗೆ ಯಾರಾದರೂ ಈ 2-3 ಲಕ್ಷರೂಪಾಯಿಗಳು ಸಾಲದೆಂದು ಮನವಿಗಳನ್ನು ಕಳುಹಿಸಿದ್ದಾರೆಯೇ !

Sri H. SIDDAVEERAPPA.—If you take the figures, comparatively Bangalore District is well served and better served than any other part of the State.

ಶ್ರೀ ಎಸ್. ಎಚ್. ತಮ್ಮಯ್ಯ.—ಕೃಷ್ಣರಾಜನಗರ ತಾಲ್ಲೂಕಿಗೆ ಈ ಬಗ್ಗೆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾಗ್ಗೂ ತಾವು ಕೆಲಸವನ್ನೇಕೆ ಇನ್ನೂ ಪುರುಮಾಡಿಲ್ಲ?

Sri H. SIDDAVEERAPPA.—I am speaking at the moment with regard to lift irrigation.

ಶ್ರೀ ಟಿ. ಜಿ. ತಿಮ್ಮೇಗೌಡ.—ತಿಪಟೂರು ತಾಲ್ಲೂಕು ಅಣ್ಣಾಪುರ, ಹೊಸಪಾಳ್ಯ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಅಂದಾಜು ಮಾಡಲಾಗಿದೆಯೆಂದು ಉತ್ತರದಲ್ಲಿ ತಿಳಿಸಿದ್ದೀರಿ. ಎಷ್ಟು ಅಂದಾಜು ಮೊಬಲಗು?

Sri H. SIDDAVEERAPPA.—I want notice for that.

Mr. SPEAKER.—There is question No. 638 on page 4. The Hon'ble Member is referring to that.

ಶ್ರೀ ಟಿ. ಜಿ. ತಿಮ್ಮೇಗೌಡ.—ಯಾವಾಗ ಅಂದಾಜನ್ನು ಮಂಜೂರುಮಾಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಶೀಘ್ರದಲ್ಲೇ ಕಾರ್ಯವನ್ನು ಕೈಕೊಳ್ಳುತ್ತೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಅನೇಕ ವರ್ಷಗಳಿಂದ ಜನರು ಇದಕ್ಕೆ ಒತ್ತಾಯಪಡಿಸುತ್ತಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಕೋಲಾರ ಜಿಲ್ಲೆಗೆರ್ಲಾ ಈಗ ಇರತಕ್ಕ 25 ಸೈಕಲ್‌ಪವರನ್ನು 50 ಸೈಕಲ್ಲಿಗೆ ಪರಿವರ್ತನೆಮಾಡಿದರೆ ಎಷ್ಟು ಖರ್ಚಾಗಬಹುದು? ಅಂದಾಜುವನ್ನೇನಾದರೂ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈಗ ತಾವು ಕೋಲಾರ ಜಿಲ್ಲೆಯಲ್ಲಿ ಬರಿ 25 ಸೈಕಲ್‌ಪವರಿನ ಕರೆಂಟನ್ನು ಒದಗಿಸಿರುವುದರಿಂದ ಬಹಳ ಓವರ್ ಲೋಡ್ ಆಗಿ, ಆ ಮೆಷೀನರಿಗಳೆರ್ಲಾ ಸುಟ್ಟು ಹೋಗುತ್ತಿದ್ದು ನೀವು ಖರ್ಚುಮಾಡಿರತಕ್ಕ 5 ಲಕ್ಷದಿಂದ ಏನೂ ಉಪಕಾರವಾಗಿಲ್ಲವೆಂಬುದನ್ನು ಪರಿಶೀಲನೆಮಾಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಇಲಾಖಾ ಅಧಿಕಾರಿಗಳೂ ಆ ರೀತಿಯಾಗಿಯೇ ಹೇಳುತ್ತಿದ್ದಾರೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಮುಂದೆ ಕೊಡತಕ್ಕ ಗ್ಯಾಂಟಿನಲ್ಲಿ ಬಹಳ ಭಾಗವನ್ನು ಕೋಲಾರ ಜಿಲ್ಲೆಗೇ ವಿಾಸರಾಗಿ ಆ ಬಗ್ಗೆ ಇಡಲು ಆಲೋಚನೆ ಮಾಡುತ್ತಿರಾ?

ಶ್ರೀ ಎಚ್. ಸಿದ್ಧವೀರಪ್ಪ.—ಆಲೋಚನೆ ಮಾಡುತ್ತೇವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಕಣವರ್ಷನ್ ಟ್ರಾನ್ಸ್‌ಫಾರ್ಮರ್ಸ್ ಎಂಬ ಯಂತ್ರಗಳನ್ನು ಮಾಡತಕ್ಕವರಿಗೆ ತಾವು ವಿದ್ಯುಚ್ಛಕ್ತಿಯನ್ನೊದಗಿಸಲು ಆಲೋಚನೆ ಮಾಡುತ್ತೀರಾ?

Sri H. SIDDAVEERAPPA.—I will get it examined.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈ ಐದು ಲಕ್ಷ ರೂಪಾಯಿಗಳನ್ನು ಕನವರ್ಷನ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಉಪಯೋಗಿಸಿದರೆ ನಮಗೆ ಅನುಕೂಲವಾಗುತ್ತದೆಯೇ ವಿನಾ, ಈ ಹಣವನ್ನು ಇನ್ನೂ ಹೆಚ್ಚಿಗೆ ಪಂಪುಗಳಿಗಾಗಿ ಕೊಟ್ಟು overload ಮಾಡಿದರೆ ಇನ್ನೂ ತೊಂದರೆಯೇ ಆಗುತ್ತದೆಂಬುದು ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಂಡಿಯಾ ಸರ್ಕಾರದವರು ಯಾವ ಪ್ರಮಾಣವನ್ನೇ ಕೊಟ್ಟಿರುತ್ತಾರೋ ಅದಕ್ಕಾಗಿಯೇ ನಾವು ಖರ್ಚುಮಾಡಬೇಕಾಗಿರುತ್ತದೆ. ಅದರ ವಿಷಯದಲ್ಲಿ ನಾನು ರಿಟರ್ನ್‌ಗಳನ್ನು ಕೂಡ ಕಳುಹಿಸಬೇಕಾಗುತ್ತದೆ. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ವಿಮರ್ಶೆಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಮೂರುಲಕ್ಷ ರೂಪಾಯಿಗಳನ್ನು ಲಿಫ್ಟ್ ಇರಿಗೇಷನ್ ಕೆಲಸಗಳಿಗಾಗಿ ತೆಗೆದಿಟ್ಟಿದ್ದೇವೆಂದು ಹೇಳಿದಿರಿ. ಗುಡೆಮಾರನಹಳ್ಳಿ, ಚಿಕ್ಕಸಂದ್ರಗಳಿಂದ ಈ ಲಿಫ್ಟ್ ಇರಿಗೇಷನ್ ಪಂಪುಗಳಿಗಾಗಿ ಎಷ್ಟು ಅರ್ಜಿಗಳು ಬಂದಿವೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು.

ಶ್ರೀ ಎಸ್. ಸಿದ್ದಪ್ಪ.—ಎಸ್ಟಿಮೇಟ್ ಆಗಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿರುವ ಎಸ್ಟಿಮೇಟ್‌ಗಳಿವೆ. ಅವಕ್ಕೇ 80 ಲಕ್ಷ ರೂಪಾಯಿಗಳ ಮೇಲೆ ಆಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಯಾವ ಯಾವ ವರ್ಷ ಯಾವ ಯಾವ ಪಟ್ಟಿ ತಯಾರಾಗಿದೆಯೆಂಬುದನ್ನು ನೋಡಿ ಕೊಂಡು ಒಂದೊಂದಾಗಿ ತೆಗೆದುಕೊಳ್ಳುತ್ತೀರೋ ಅಥವಾ ಹಿಂದಿನದನ್ನು ಬಿಟ್ಟೇಬಿಟ್ಟು ಮುಂದೆ ಮಾಡಿದ್ದನ್ನು ತೆಗೆದುಕೊಳ್ಳುತ್ತೀರೋ?

ಶ್ರೀ ಎಚ್. ಸಿದ್ದವೀರಪ್ಪ.—ಯಾವುದು ಅತ್ಯಾವಶ್ಯಕವಾಗಿದೆಯೋ ಅದಕ್ಕೆ ಮುಂಚೆ ಗಮನಕೊಡಬೇಕಾಗುತ್ತದೆ. ಒಟ್ಟಿನಲ್ಲಿ ಈಚೆಗೆ ವಿದ್ಯುಚ್ಛಕ್ತಿಯ ಉಪಯೋಗದ ವಿಷಯದಲ್ಲಿ ರೈತರು ಕಣ್ಣು ತೆರೆದಿರುವುದು ಬಹಳ ಸಂತೋಷದ ಸೂಚನೆಯಾಗಿದೆ. ಬಂಗಾರಕ್ಕಿಂತಲೂ ಅದಕ್ಕೆ ಹೆಚ್ಚು ಬೆಲೆಯಿದೆಯೆನ್ನಬೇಕು. ಆದ್ದರಿಂದ, ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸಂಸ್ಥಾನಾಮಳೆ equitable ಆಗಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಏರ್ಪಾಡುಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರವನ್ನು distress area ಎಂದು ಪರಿಗಣಿಸಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ವಿ. ವೆಂಕಟಪ್ಪ.—ತಾವು ಬಂದವೇಲೆ ಆ ಪ್ರದೇಶಕ್ಕೆ ಒಂದು ಪಂಪನ್ನಾದರೂ ಡಿಪಾರ್ಟ್‌ಮೆಂಟಿನವರು ಓದಗಿಸಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಲಾಖೆಯವರನ್ನು ಕೇಳಿ, ಅಲ್ಲಗೆ ಕೊಡುವಹಾಗಿದ್ದರೆ 53-54ರಲ್ಲಿ ಕೊಡುವ ಏರ್ಪಾಡುಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಆ ಪ್ರದೇಶದಲ್ಲಿ ನೀರಿನ ವಸತಿಯಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆರೀತಿ ಇದೆಯೆಂಬುದು ನನ್ನ ಗಮನಕ್ಕೂ ಬಂದಿದೆ.

ಶ್ರೀ ವಿ. ವೆಂಕಟಪ್ಪ.—ಈ ವರ್ಷ ಅಲ್ಲಗೆ ಒಂದಾದರೂ ಕೊಡುವುದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳನ್ನು Distress area ಗಳೆಂದು declare ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಗ್ರಾಮಗಳನ್ನು ಕ್ಷಾಮಪೀಡಿತ ಪ್ರದೇಶವೆಂದು ಸಾರಿದ್ದೇವೆ. ಯಾವ ಯಾವುದು ಎಂದು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಬಿ. ವೈ. ನೀರೇಗೌಡ.—ಮಂಡ್ಯ ಡಿಸ್ಟ್ರಿಕ್ಟಿಗೆ ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮಲ್ಲಿರತಕ್ಕ ನೀರಾವರಿ ಸೌಕರ್ಯಗಳು ಬಾಕಿ ಯಾವಕಡೆಗೂ ಇಲ್ಲವೆಂಬುದನ್ನ ಮರೆಯಬಾರದು.

ಶ್ರೀ ಬಿ. ವೈ. ನೀಲೇಗೌಡ.—ಪ್ರಪಂಚಕ್ಕೇ ಪ್ರಸಿದ್ಧವಾದ ನಾಗಮಂಗಲ ತಾಲ್ಲೂಕಿನಲ್ಲಿ ಕುಡಿಯುವುದಕ್ಕೂ ನೀರಿಲ್ಲವೆಂಬುದು ತಮಗೆ ಗೊತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕಾಗಿಯೇ ಅಲ್ಲಿಗೆ ಒಂದು ಕೊಟ್ಟಿದ್ದೇವೆ. ಇನ್ನೂ ಏನಾದರೂ 53-54ರಲ್ಲಿ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡುತ್ತೇವೆ.

ಶ್ರೀ ಕೆ. ವಿ. ಶಂಕರಗೌಡ.—ತಾವು ಡಿಸ್ಟ್ರಿಕ್ಟುವಾರು ಈ ಹಣವನ್ನು ಯಾವ basis ಮೇಲೆ ಹಂಚುತ್ತೀರಿ ?

Sri H. SIDDAVEERAPPA.—This is exclusively meant to be made use of in distress areas where famine conditions often occur. This is more a permanent measure of giving relief to distress areas to ward off famine conditions.

ಶ್ರೀ ಕೆ. ವಿ. ಶಂಕರಗೌಡ.—ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಎಷ್ಟು ತಾಲ್ಲೂಕುಗಳನ್ನು distress area ಎಂದು declare ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಎರಡು ಎಂದು ಜ್ಞಾಪಕ.

ಶ್ರೀ ಕೆ. ವಿ. ಶಂಕರಗೌಡ.—ಶಿವಮೊಗ್ಗದಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ನಾಲ್ಕು.

ಶ್ರೀ ಕೆ. ವಿ. ಶಂಕರಗೌಡ.—ಚಿತ್ರದುರ್ಗದಲ್ಲ ?

Sri H. SIDDAVEERAPPA.—Almost all.

ಶ್ರೀ ಕೆ. ವಿ. ಶಂಕರಗೌಡ.—ಎರಡು ತಾಲ್ಲೂಕುಗಳಿಗೆ ಒಂದುಲಕ್ಷ ರೂಪಾಯಿ ಕೊಟ್ಟರೆ, ನಾಲ್ಕು ತಾಲ್ಲೂಕುಗಳಿಗೆ ಎಷ್ಟು ಕೊಡಬೇಕಾಗುತ್ತದೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಅಲ್ಲ. ಅಲ್ಲಿರುವುದು 50 ಸ್ಕೈಕರ್ ಕರೆಂಟು. ಅಲ್ಲದೆ ಅಲ್ಲ ತುಂಗಾನದಿಗೇ ಪಂಪುಗಳನ್ನು ಹಾಕಿದ್ದೇವೆ. ತುಂಗಾನದಿಗೆ ಈಗಾಗಲೇ ಅಲ್ಲ ಹಾಕಿರುವ ಅನೇಕರು ಅದರ ಪ್ರಯೋಜನವನ್ನು ತೋರಿಸಿಕೊಟ್ಟಿದ್ದಾರೆ. ಅದನ್ನೇ ಅಲ್ಲಿ ಮುಂದುವರಿಸಬೇಕೆಂದಿದ್ದೇವೆ.

ಶ್ರೀ ಕೆ. ವಿ. ಶಂಕರಗೌಡ.—ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವ ಗ್ರಾಮಗಳನ್ನು 'ಡಿಸ್ಟ್ರೆಸ್ ಏರಿಯಾ'ಗಳೆಂದು ಪರಿಗಣಿಸಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನು ಒಂದೆರಡು ನಿಮಿಷದಲ್ಲೇ ಆ ಉತ್ತರವನ್ನು ತರಿಸಿಕೊಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಿರಿಯೂರು ತಾಲ್ಲೂಕು ಐಮಂಗಲ ಹೋಬಳಿಯ ಮಂದಾಳು, ಮಲ್ಲಪ್ಪನ ಹಳ್ಳಿ ಮತ್ತು ಇತರ ಗ್ರಾಮಗಳ ನಿವಾಸಿಗಳಿಂದಲೂ ಮತ್ತು ಚಿತ್ರದುರ್ಗ ತಾಲ್ಲೂಕು ಗೊಡಬನಹಾಳು ಮತ್ತು ಸೊಂಡೇಕೊಳ ಗ್ರಾಮಗಳ ನಿವಾಸಿಗಳಿಂದಲೂ ಅರ್ಜಿಗಳು ಬಂದಿದ್ದವೇ ಎಂದು ಇಲ್ಲ ಕೇಳಿದ್ದಾರೆ. ಇವರುಗಳು ಮಂತ್ರಿಗಳು ಟೂರ್ ಬಂದಾಗ್ಗೆ ಈ ಬಗ್ಗೆ ಅರ್ಜಿ ಕೊಟ್ಟಿದ್ದರೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಮಂತ್ರಿಗಳು ಟೂರ್ ಹೋದರೆ ಅರ್ಜಿಗಳು ಬರುವುದೇ ಎಲೆಕ್ಷ್ಚನ್ ಸಿಟಿ ಬೇಕು ಎಂದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಲಿ ಯಾವ ಯಾವ ಹಳ್ಳಿಗಳಿಗೆ ಈಗಾಗಲೇ power ನ್ನು sanction ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು. ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—(a) ಪ್ರಶ್ನೆಯಲ್ಲಿ ಗೊಡಬನಹಾಳು, ಸೊಂಡೇಕೊಳ, ಬಂಗಾರಕ್ಕನಹಳ್ಳಿ—ಈ ಹಳ್ಳಿಗಳಿಂದ ಎಸ್ಟಿಮೇಟುಗಳು ಬಂದಿಲ್ಲವೆಂದು ಹೇಳಿದ್ದೀರಿ. ಛೀಫ್ ಎಂಜಿನಿಯರ್‌ರವರು ಎಸ್ಟಿಮೇಟನ್ನು ತಯಾರ್ಮಾಡಿಸಿ ಆಗಲೇ ಸರ್ಕಾರಕ್ಕೆ ಮಂಜೂರಾತಿಗೆ ಕಳುಹಿಸಿದ್ದೇವೆಂದು ತಿಳಿಸಿದರು. ಇದರಲ್ಲ ಯಾವುದು ನಿಜ ?

Sri H. SIDDAVEERAPPA.—By the time this answer was prepared, perhaps that estimate had not been received.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕೆರೆಗಳಿರುವುದು ಬಹಳ ಕಡಮೆಯಲ್ಲವೇ ?

Sri H. SIDDAVEERAPPA.—Yes, comparatively.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಲಿ ಬಾವಿಗಳು 10 ಸಾವಿರಕ್ಕೆ ಮೇಲ್ಪಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಾವಿಗಳು ಹೆಚ್ಚಾಗಿವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅಲ್ಲಿ ಯಾವಾಗಲೂ ಕ್ಷಾಮ ಪರಿಸ್ಥಿತಿಯಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಿಜ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆದ್ದರಿಂದ ಅಲ್ಲ ಪಂಪುಗಳಿಗೆ ಹೆಚ್ಚಿನ ಅಗತ್ಯವಿದೆಯೆಂಬುದು ನ್ಯಾಯವಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಸರ್ಕಾರದವರ ಗಮನದಲ್ಲಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಸಂಸ್ಥಾನಾಮಳೆ ಲಪ್ಪ್ ಇರಿಗೇಷನ್ನಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜುಮಾಡುವ ಬಗ್ಗೆ ಎಸ್ಟಿಮೇಟ್ ಮಾಡಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ರೀತಿಯಾಗಿ ಸಂಸ್ಥಾನಾಮಳೆ ಇನ್ನೂ ಎಷ್ಟೆಷ್ಟು ಬಾವಿಗಳಿವೆಯೆಂದು ಪಟ್ಟಿ ತರಿಸಿಕೊಂಡು, ಒಟ್ಟು ಎಷ್ಟು ಬೇಕೆಂದು ಗೊತ್ತುಮಾಡಿಕೊಂಡಿದ್ದೇವೆ. ಆದಷ್ಟುಮಟ್ಟಿಗೆ ವಿದ್ಯುಚ್ಛಕ್ತಿ ಸರಬರಾಯಿ ಎಲ್ಲಾಕಡೆಗೂ ಮಾಡಬೇಕೆಂದಿದೆ. With our limited power supply, we want to give preterence to the Agricultural Department and for lift irrigation.

ಶ್ರೀ ಎರ'. ಸಿದ್ದಪ್ಪ.—ನಿನ್ನೆ ದಿವಸ ಶ್ರೀಮಾನ್ ಎಸ್. ಆರ್. ನಾಗಪ್ಪಶೆಟ್ಟರ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಕೋಲಾರ ಡಿಸ್ಟ್ರಿಕ್ಟಿಗೆ 1,653 ಪಂಪ್ ಸೆಟ್ಟುಗಳನ್ನೂ, ಬೆಂಗಳೂರು ಡಿಸ್ಟ್ರಿಕ್ಟಿಗೆ 1,335 ಪಂಪುಗಳನ್ನು ಕೊಟ್ಟಿರುವಲ್ಲಿ, ಶಿವಮೊಗ್ಗ ಡಿಸ್ಟ್ರಿಕ್ಟಿಗೆ 61 ಪಂಪುಗಳನ್ನು ಮಾತ್ರ ಕೊಟ್ಟಿರುವುದಾಗಿ ತಿಳಿಸಿರುವುದು ಗೊತ್ತೇ ?

Sri H. SIDDAVEERAPPA.—That was the answer given yesterday.

ಶ್ರೀ ಎಲ್. ಸಿದ್ದಪ್ಪ —1949-50ನೆಯ ಸಾಲಿನಿಂದ ತುಂಗಭದ್ರಾ ಮತ್ತು ತುಂಗಾನದಿಗಳ ಎರಡು ಪಕ್ಕದಲ್ಲಿರುವ ಗ್ರಾಮಗಳಿಗೆ ಎದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಶಿವಮೊಗ್ಗ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯವರೂ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಯವರೂ ಮನವಿಮಾಡಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಲ್. ಸಿದ್ದಪ್ಪ.—ಅದರಂತೆ ಕೊಟ್ಟಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ. —ಕೊಟ್ಟಿದೆ.

ಶ್ರೀ ಎಲ್. ಸಿದ್ದಪ್ಪ.—ಭದ್ರಾವತಿ ನದಿಯ ಪಕ್ಕದ ಗ್ರಾಮಗಳಲ್ಲಿ ಇನ್ನೂ ಎಷ್ಟೋ ಗ್ರಾಮಗಳು ಬಿಟ್ಟು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಪೂರಾ ಕೊಡಲಕ್ಕಾಗಲ್ಲ.

ಶ್ರೀ ಎಲ್. ಸಿದ್ದಪ್ಪ.—ಆ ಪ್ರದೇಶದಲ್ಲ ನದಿಯ ಸೌಕರ್ಯವಿರುವುದರಿಂದ, ಅಲ್ಲಿ lift irrigation ಹಾಕುವುದಕ್ಕೆ ಹೆಚ್ಚು ಅವಕಾಶವಿದೆಯಲ್ಲವೇ ?

Sri H. SIDDAVEERAPPA.—That is why we have taken it up. The policy of the Government is to admit or to grant lift irrigation facilities for the whole length of the Tungabhadra river.

ಶ್ರೀ ಎಲ್. ಸಿದ್ದಪ್ಪ.—ಈಗ ಬಿಟ್ಟಿರುವ, ಭದ್ರಾವತಿ ತಾಲ್ಲೂಕಿನಲ್ಲಿನ ಗ್ರಾಮಗಳಿಗೂ 53-54ನೆಯ ಸಾಲಿನಲ್ಲಾದರೂ ವಿದ್ಯುಚ್ಛಕ್ತಿ ಒದಗಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆಲೋಚನೆ ಮಾಡುತ್ತೇವೆ.

9 A. M.

Sri H. SIDDAVEERAPPA.—I had promised to give the information to Sri Sankare Gowda.

ಶ್ರೀ ಕೆ. ಎ. ಶಂಕರಗೌಡ.—ಮಂಡ್ಯ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾಗಮಂಗಲ, ಕೃಷ್ಣರಾಜಪೇಟೆ ಮತ್ತು ಪಾಂಡವಪುರದ ಕೆಲವು ಭಾಗಗಳು.

ಶ್ರೀ ಕೆ. ಎ. ಶಂಕರಗೌಡ.—ಮದ್ದೂರು ತಾಲ್ಲೂಕಿನಲ್ಲಲ್ಲವೆ, ಕೆಲವು ಭಾಗದಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Trained Primary School Teachers in the State.

Q.—88. Sri G. NARAYANA GOWDA (Mulbagal-Srinivaspur).—Will the Government be pleased to state :—

(*a*) the number of Primary School Teachers in the State ?

(*b*) of them, the number that has been trained ?

A.—Sri A. G. RAMACHANDRA RAO (Minister for Law and Education).—

(*a*) 20,883 (includes teachers in N.T.M. Schools also).

(*b*) 6,287.

ಶ್ರೀ ಜಿ. ನಾರಾಯಣಗೌಡ.—20,883 ಜನ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳಿದ್ದಾರೆಂದು ತಿಳಿಸಿದ್ದೀರಿ ; ಇವರಲ್ಲಿ ಎಸ್.ಎಸ್.ಎಲ್.ಸಿ. ಆದವರೆಷ್ಟು ಜನರಿದ್ದಾರೆ ?

Sri A. G. RAMACHANDRA RAO.—The question is regarding the trained and untrained.

Mr. SPEAKER.—The question is about training.

ಶ್ರೀ ಜಿ. ನಾರಾಯಣಗೌಡ.—ಹಿಂದೆ ಪೇ ಕಮಿಟಿಯ ಶಿಫಾರಸಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿಯೂ ಎಸ್.ಎಸ್.ಎಲ್.ಸಿ. ಆದ ಉಪಾಧ್ಯಾಯರಿಗೆ 40 ರೂಪಾಯಿ ಪ್ರಾರಂಭ ಸಂಬಳ ಕೊಡಬೇಕೆಂದಿದೆಯಲ್ಲವೆ ?

Mr. SPEAKER.—He wants notice.

ಶ್ರೀ ಜಿ. ನಾರಾಯಣಗೌಡ.—ಸುಮಾರು 80 ಜನರು ಎಸ್ಎಸ್.ಎಲ್.ಸಿ. ಆಗಿರುವ ಉಪಾಧ್ಯಾಯರಿಗೆ ಪ್ರೈಮರಿ ಶಾಲಾ ಉಪಾಧ್ಯಾಯರ ತಲಬನ್ನೇ ಕೊಡುತ್ತಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು ಪ್ರೈಮರಿ ಶಾಖೆಗಳ ಉಪಾಧ್ಯಾಯರಿಗೆ ಮತ್ತು ಮಾಧ್ಯಮಿಕ ಶಾಲೆ ಉಪಾಧ್ಯಾಯರಿಗೆ ಬೇರೆ ಬೇರೆ ಸಂಬಳದ ಗ್ರೇಡುಗಳಿವೆ, ಅದರಂತೆ ಪಡೆಯುತ್ತಿದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಆದರೆ, ಪೇ ಕಮಿಷ್ಟ ಶಿಫಾರಸಿನ ಪ್ರಕಾರ ಅವರು ಎಲ್ಲೇ ಇರಲಿ ಎಸ್.ಎಸ್.ಎಲ್.ಸಿ. ಮಾಡಿದ್ದರೆ ಅವರಿಗೆ 40 ರೂಪಾಯಿ ಪ್ರಾರಂಭದ ಸಂಬಳ ಕೊಡಬೇಕೆಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು.

ಶ್ರೀ ಜಿ. ನಾರಾಯಣಗೌಡ.—ಅವರಿಗೆ ನ್ಯಾಯ ದೊರಕಿಸುವ ರೀತಿಯಲ್ಲಿ ಪರಿಶೀಲನೆ ಮಾಡುತ್ತಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರಿಗೇನೂ ಅನ್ಯಾಯವಾಗಿಲ್ಲವೆಂದು ಸರಕಾರದ ಅಭಿಪ್ರಾಯ.

ಶ್ರೀ ಜಿ. ನಾರಾಯಣಗೌಡ.—6,287 ಜನರಿಗೆ ಟ್ರೈನಿಂಗ್ ಆಗಿದೆಯೆಂದು ತಿಳಿಸಲಾಗಿದೆ ಇನ್ನು ಮೇಲೆ ಕೆಲಸಕ್ಕೆ ನೇಮಿಸಿದ ಕಾಲದಲ್ಲೇ ಟ್ರೈನಿಂಗ್ ಕೊಡುವುದನ್ನು ಪರಿಶೀಲನೆಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಕೆಲವು ಪ್ರೈಮರಿ ಸ್ಕೂಲು ಉಪಾಧ್ಯಾಯರನ್ನು ಮಿಡ್ಲ್ ಸ್ಕೂಲು ಉಪಾಧ್ಯಾಯರಾಗಿ ಪ್ರೊಮೋಟ್ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವರನ್ನು ಮಾಡಿರಬಹುದು.

ಶ್ರೀ ಬಿ. ಎಸ್. ಬೋರಣ್ಣಗೌಡ.—ಹಾಗಿದ್ದರೆ ಅವರಿಗೆ ಮಿಡ್ಲ್‌ಸ್ಕೂಲು ಉಪಾಧ್ಯಾಯರ ಗ್ರೇಡನ್ನು ಕೊಡುತ್ತೀರಾ ?